ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ:115:ಪಿಹೆಚ್‌ಪಿ:2010

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:05.05.2011.

## ಸುತ್ತೋಲೆ

ವಿಷಯ:-ಅಂಗವಿಕಲತೆ ಹೊಂದುವ ವ್ಯಕ್ತಿಯನ್ನು ಕೆಲಸದಿಂದ ತೆಗೆದು ಹಾಕದೇ ಇರುವ ಬಗ್ಗೆ ಅಥವಾ ಅವರ ದರ್ಜೆಯನ್ನು ಇಳಿಸದೇ ಇರುವ ಬಗ್ಗೆ ಸೂಚನೆಗಳು.

ಉಲ್ಲೇಖ:-ರಾಜ್ಯ ಆಯುಕ್ತರು, ಅಂಗವಿಕಲರ ಅಧಿನಿಯಮ, ಬೆಂಗಳೂರು ಇವರ ದಿನಾಂಕ:06.02.2010 ಮತ್ತು 22.12.2010ರ ಪತ್ರಗಳು.

----

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995ನ್ನು ದಿನಾಂಕ:01.01.1996ರ ಭಾರತೀಯ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

ಸದರಿ ಅಧಿನಿಯಮದ ಕಲಂ 47ನ್ನು ಈ ಕೆಳಗೆ ಉಚ್ಛರಿಸಿದೆ:-

47. ಸರ್ಕಾರಿ ಉದ್ಯೋಗದಲ್ಲಿ ಪಕ್ಷಪಾತ ಮಾಡಕೂಡದು:-

1) ಯಾವುದೇ ಸಂಸ್ಥೆಯ ಸೇವೆಯಲ್ಲಿರುವಾಗ ಅಂಗವಿಕಲತೆ ಹೊಂದುವ ವ್ಯಕ್ತಿಯನ್ನು ಕೆಲಸದಿಂದ ತೆಗೆದುಹಾಕತಕ್ಕದ್ದಲ್ಲ ಅಥವಾ ದರ್ಜೆಯನ್ನು ಇಳಿಸತಕ್ಕದ್ದಲ್ಲ.

"ಆದರೆ, ಒಬ್ಬ ನೌಕರನು ಅಂಗವಿಕಲತೆ ಹೊಂದಿದ ನಂತರ ಅವನು ಹೊಂದಿರುವ ಹುದ್ದೆಯು ಅವನಿಗೆ ಸೂಕ್ತವೆನಿಸದಿದ್ದ ಪಕ್ಷದಲ್ಲಿ, ಅದೇ ವೇತನಶ್ರೇಣಿ ಮತ್ತು ಸೇವಾ ಸೌಕರ್ಯಗಳೊಂದಿಗೆ ಇತರೆ ಹುದ್ದೆಗೆ ಅವರನ್ನು ಸ್ಥಳಾಂತರಿಸಬಹುದು.

ಆದರೆ, ಅಂಥ ನೌಕರನನ್ನು ಯಾವುದೇ ಇತರ ಹುದ್ದೆಗೆ ಹೊಂದಿಸುವುದು ಸಾಧ್ಯವಾಗದಿದ್ದಲ್ಲಿ ಅವರನ್ನು ಸೂಕ್ತ ಹುದ್ದೆ ದೊರೆಯುವವರೆಗೆ ಸಂಖ್ಯಾತಿರಿಕ್ತ (ಸೂಪರ್‌ನ್ಯೂಮರರಿ) ಹುದ್ದೆಯಲ್ಲಿ ಅಥವಾ ಸೇವಾ ನಿವೃತ್ತಿ ವಯಸ್ಸು ಹೊಂದುವವರೆಗೆ ಇದರಲ್ಲಿ ಯಾವುದು ಮೊದಲಾಗುವುದೋ ಅಲ್ಲಿಯವರೆಗೆ ಹಾಗೆಯೇ ಇರಿಸಿಕೊಳ್ಳತಕ್ಕದ್ದು",

2) ಅಂಗವಿಕಲನೆಂಬ ಕಾರಣಕ್ಕಾಗಿ ಆ ವ್ಯಕ್ತಿಗೆ ಯಾವುದೇ ಬಡ್ತಿಯನ್ನು ನಿರಾಕರಿಸತಕ್ಕದ್ದಲ್ಲ.

"ಆದರೆ ಸಮುಚಿತ ಸರ್ಕಾರ, ಯಾವುದೇ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಅಧಿಸೂಚನೆ ಮೂಲಕ ಮತ್ತು ಅಂಥ ಷರತ್ತುಗಳೇನಾದರೂ ಇದ್ದರೆ ಅವುಗಳನ್ನು ಈ ಅಧಿಸೂಚನೆಯಲ್ಲಿ ನಮೂದಿಸುವುದಕ್ಕೆ ಒಳಪಟ್ಟು, ಈ ಪ್ರಕರಣದ ಉಪಬಂಧಗಳಿಂದ ಯಾವುದೇ ಕಾರ್ಯಸಂಸ್ಥೆಗೆ ವಿನಾಯಿತಿ ನೀಡಬಹುದು"

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995ರಲ್ಲಿ ಅಂಗವಿಕಲತೆ ಹೊಂದುವ ನೌಕರರ ಹಕ್ಕುಗಳನ್ನು

ಸಂರಕ್ಷಿಸುವ ಬಗ್ಗೆ ಸ್ಪಷ್ಟವಾಗಿ ತಿಳಿಸಲಾಗಿದ್ದು, ಸೇವೆಯಲ್ಲಿದ್ದಾಗ ಶಾರೀರಿಕ ಅಂಗವಿಕಲತೆಗೆ ಒಳಗಾದ ಸಿಬ್ಬಂದಿಗಳಿಂದ ಅನೇಕ ದೂರುಗಳನ್ನು ಸ್ವೀಕರಿಸಲಾಗುತ್ತಿದ್ದು, ರಾಜ್ಯ ಆಯುಕ್ತರ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿ ಅಂಗವಿಕಲರ ಅಧಿನಿಯಮ 1995ರ ಕಲಂ 47ರ ರೀತ್ಯ ಕ್ರಮ ಕೈಗೊಳ್ಳುವಂತೆ ಆದೇಶಿಸಲಾಗುತ್ತಿದೆ. ಈ ಆದೇಶಗಳನ್ನು ಸಂಬಂಧಿಸಿದ ಇಲಾಖೆ/ಸಂಸ್ಥೆಗಳು ಪಾಲಿಸಲು ವಿಳಂಬ ಮಾಡುತ್ತಿರುವುದಾಗಿ ತಿಳಿದುಬಂದಿದೆ. ಮುಂದುವರೆದು, ಆಯುಕ್ತರ ನ್ಯಾಯಾಲಯದ ಆದೇಶವನ್ನು ಪಾಲಿಸುವ ಬಗ್ಗೆ ಸರ್ಕಾರದ ಅನುಮತಿ:ಸ್ಪಷ್ಟೀಕರಣ ಕೋರುತ್ತಿರುವುದರಿಂದ, ಸರ್ಕಾರದ ಅನುಮತಿ:ಸ್ಪಷ್ಟೀಕರಣ ಬರುವವರೆಗೆ ಅಂಗವಿಕಲತೆ ಹೊಂದಿದ ವ್ಯಕ್ತಿಯು ವೇತನವಿಲ್ಲದೆ ತೊಂದರೆ ಅನುಭವಿಸುವಂತಾಗುತ್ತದೆ.

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995ನ್ನು, ಭಾರತ ಸರ್ಕಾರವು ಹೊರಡಿಸಿದ್ದು, ಸದರಿ ಅಧಿನಿಯಮದ ಕಲಂ 63(2)ರ ಮೇರೆಗೆ ರಾಜ್ಯ ಆಯುಕ್ತರು ಅಂಗವಿಕಲರ ಅಧಿನಿಯಮ ಇವರ ಮುಂದೆ ಇರುವ ಪ್ರತಿಯೊಂದು ವ್ಯವಹರಣೆಯು ಭಾರತೀಯ ದಂಡ ಸಂಹಿತೆಯ 193 ಮತ್ತು 228ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಯಾಗಿರತಕ್ಕದ್ದು, ಮತ್ತು ಮುಖ್ಯ ಆಯುಕ್ತರು, ಆಯುಕ್ತರುಗಳು ಸಕ್ಷಮ ಪ್ರಾಧಿಕಾರ ಇವರುಗಳನ್ನು 195ನೇ ಪ್ರಕರಣದ ಮತ್ತು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1972ರ 26 ಅಧ್ಯಾಯದ ಉದ್ದೇಶಕ್ಕಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

ಈ ಹಿನ್ನೆಲೆಯಲ್ಲಿ ಅಂಗವಿಕಲತೆ ಹೊಂದುವ ನೌಕರರನ್ನು ಕೆಲಸದಿಂದ ತೆಗೆದು ಹಾಕತಕ್ಕದ್ದಲ್ಲ ಅಥವಾ ಅವರ ದರ್ಜೆಯನ್ನು ಇಳಿಸತಕ್ಕದ್ದಲ್ಲ ಎನ್ನುವ ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995ರ ಕಲಂ 47ನ್ನು, ಯಾವುದೇ ದೂರಿಗೆ ಅವಕಾಶವಿಲ್ಲದಂತೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಸರ್ಕಾರದ ಎಲ್ಲಾ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ತಿಳಿಸಲಾಗಿದೆ. ಹಾಗೂ ಈ ಸೂಚನೆಗಳನ್ನು ಸಂಬಂಧಪಟ್ಟ ಇಲಾಖೆಗಳಡಿ ಬರುವ ಇಲಾಖಾ ಮುಖ್ಯಸ್ಥರುಗಳು/ನಿಗಮ/ಮಂಡಳಿ ಮತ್ತು ಸ್ಥಳೀಯ ಸಂಸ್ಥೆಗಳೂ ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚನೆಗಳನ್ನು ನೀಡುವಂತೆ ಕೋರಲಾಗಿದೆ.

(ಸಿ.ಎಸ್.ಸೀತಾರಾಮ್)
ಸರ್ಕಾರದ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಸಂಕಲನಕಾರರು ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆಗೆ 50 ಪ್ರತಿಗಳನ್ನು ಒದಗಿಸುವಂತೆ ಕೋರಲಾಗಿದೆ.

ಪ್ರತಿಗಳು:

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ.
2. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು,ವಿಧಾನಸೌಧ, ಬೆಂಗಳೂರು.
3. ಆಯುಕ್ತರು, ಅಂಗವಿಕಲರ ಅಧಿನಿಯಮ, ನಂ40, ತಂಬು ಚೆಟ್ಟಿ ರಸ್ತೆ, ಕಾಕ್ಸ್ ಟೌನ್,ಬೆಂಗಳೂರು-560005.
4. ಎಲ್ಲಾ ಜಿಲ್ಲಾಧಿಕಾರಿಗಳು/ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
5. ಎಲ್ಲಾ ಇಲಾಖಾ ಮುಖ್ಯಸ್ಥರುಗಳು,
6. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಬೆಂಗಳೂರು.
7. ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ,ಬೆಂಗಳೂರು.
8. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ ಇವರ ಆಪ್ತ ಕಾರ್ಯದರ್ಶಿಗಳಿಗೆ,
9. ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು:ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
10. ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿಗಳು.

[ಕ್ರ.ಸಂ.4,5 ಮತ್ತು 9ನ್ನು ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರ ಮೂಲಕ ಕಳುಹಿಸುವುದು]